

## ಇತ್ತೀಚಿನ ಮತ್ತು ಬಹುಶಃ ಅತ್ಯಂತ ಕೌತುಕಮಯ ಆವಿಷ್ಕಾರ – ಕಂಪ್ಯೂಟರ್ ನ್ಯಾವಿಗೇಶನ್

# "ಕಂಪ್ಯೂಟರ್ ನಿರ್ದೇಶಿತ ಕನಿಷ್ಠ ಛೇದದ ಮಂಡಿ ಬದಲಿಸುವ ಶಸ್ತ್ರಕ್ರಿಯೆ"



ಮಧ್ಯವಯಸ್ಕರು ಮತ್ತು ವೃದ್ಧರು ಸೋಫಾ ಮೇಲೆ ಕುಳಿತುಕೊಂಡು ಕಾಲಕಳೆಯುವ ದಿನಗಳು ಮುಗಿದುಹೋದವು. ಮಧ್ಯ ಮತ್ತು ಮೇಲ್ಪಟ್ಟ ವಯಸ್ಸಿನವರು ಒಂದು ಸಕ್ರಿಯ ಹಾಗೂ ಆರೋಗ್ಯಕರ ಜೀವನಶೈಲಿಯನ್ನು ಹೆಚ್ಚಾಗಿ ಬಯಸುತ್ತಿದ್ದಾರೆ. ಆದರೆ, ವಯಸ್ಸಿನೊಂದಿಗೆ ಬರುವ, ಅನಿವಾರ್ಯ ನೋವು–ಯಾತನೆಗಳನ್ನು ಎದುರಿಸಬೇಕಾದಾಗ ಹತಾಶೆ ಉಂಟಾಗುವುದು, ಮತ್ತು ನಿಮ್ಮ ಪ್ರೀತಿಯ ಚಟುವಟಿಕೆಗಳಿಂದ ನಿಮ್ಮನ್ನು ದೂರವಿಡುತ್ತದೆ. ಈ ನೋವುಗಳಿಗೆ ಒಂದು ಪ್ರಮುಖ ಕಾರಣವೆಂದರೆ, ಮಂಡಿಯ ಸವೆತ ಮತ್ತು ಹಾನಿ (ಆಸ್ಟಿಯೋ ಆರ್ತ್ರೈಟಿಸ್ ಅಥವಾ ಅಸ್ಥಿಸಂಧಿವಾತ). ಮೊಣಕಾಲಿನ ಕೀಲಿನ ಕಾರ್ಟಿಲೇಜ್ ಹಾಳಾದರೆ ಅಥವಾ ಸವೆದು ಹೋದರೆ ಅತೀವ ನೋವುಂಟಾಗುತ್ತದೆ. ರೋಗಿಗೆ ಮಂಡಿಯನ್ನು ಕದಲಿಸಲೂ ಬಹಳ ಕಷ್ಟವಾಗುತ್ತದೆ. ಘರ್ಷಣೆಯಿಲ್ಲದೆ ಒಂದರ ಮೇಲೊಂದು ಜಾರಬೇಕಾದ ಮೂಳೆಗಳು ಪರಸ್ಪರ ಉಜ್ಜುತ್ತವೆ ಮತ್ತು ಘಟ್ಟಿಸುತ್ತವೆ. ಹೀಗೆ ಹಾಳಾದ ಮಂಡಿಸಂಧಿಯನ್ನು ಕೃತಕ ಅಂಗದಿಂದ ಬದಲಿಸುವ ಸರ್ಜರಿ ಮಾಡಿದರೆ ಆ ನೋವು ಇಲ್ಲವಾಗುತ್ತದೆ ಮತ್ತು ಮೊಣಕಾಲಿನ ಚಲನೆ ಮೊದಲಿಗಿಂತ ಉತ್ತಮಗೊಳ್ಳುತ್ತದೆ.



ಇಡೀ ಮಂಡಿ ಬದಲಾವಣೆಯ (Total Knee Replacement – TKR) ಸರ್ಜರಿ ಮಾಡಿಸಿಕೊಂಡ ಜನರಲ್ಲಿ ಶೇ. 95ರಿಂದ 98ಕ್ಕೂ ಹೆಚ್ಚಿನವರು ಮಂಡಿನೋವು ಹಠಾತ್ತಾಗಿ ಕಡಿಮೆಯಾಗಿ ದೈನಂದಿನ ಕ್ರಿಯೆಗಳನ್ನು ಮಾಡುವ ಸಾಮರ್ಥ್ಯ ಹೆಚ್ಚುವುದನ್ನು ಕಾಣಬಹುದು. ಮಂಡಿನೋವಿನ ಪರಿಹಾರಕ್ಕಾಗಿ ಹೆಚ್ಚೆಚ್ಚು ಜನ ಈ ಶಸ್ತ್ರಕ್ರಿಯೆಗೆ ಮೊರೆ ಹೋಗುತ್ತಿದ್ದಾರೆ. ಅತಿ ಸಾಮಾನ್ಯವಾಗಿ TKRನ ಉಪಯೋಗ, ಅಸ್ಥಿಸಂಧಿವಾತ ಅಥವಾ ಮಂಡಿಸಂಧಿಯ ಕೊರೆತ–ಸವೆತದಲ್ಲಿ. TKR ಸಂದರ್ಭದಲ್ಲಿ ಶಸ್ತ್ರಚಿಕಿತ್ಸಕ ಮಂಡಿಸಂಧಿಯ ಮೇಲ್ಮೈನಿಂದ ಹಾಳಾದ ಕಾರ್ಟಿಲೇಜ್ ಮತ್ತು ಮೂಳೆಯನ್ನು ತೆಗೆದು ಅದರ ಬದಲು ಲೋಹ ಮತ್ತು ಪ್ಲಾಸ್ಟಿಕ್‌ನ ಅಂಗಗಳನ್ನು ಇರಿಸುತ್ತಾರೆ. TKR ಇಂದು ಒಂದು ಸಾಮಾನ್ಯ ಪ್ರಕ್ರಿಯೆಯಾಗಿದ್ದು, ಯಶಸ್ಸಿನ ಪ್ರಮಾಣ ಬಹಳ ಹೆಚ್ಚಿದೆ. ಇತ್ತೀಚಿನ ಆವಿಷ್ಕಾರಗಳಿಂದ ಆರಂಭಿಕ ಮತ್ತು ದೀರ್ಘಕಾಲೀನ ಫಲಿತಾಂಶಗಳು ಮತ್ತಷ್ಟು ಉತ್ತಮಗೊಂಡಿವೆ. ಹೊಸ ಇಂಪ್ಲಾಂಟ್ ವಿನ್ಯಾಸಗಳಿಂದ, ಸಾಮಾನ್ಯ ಚಲನೆಗಳನ್ನು ಇನ್ನೂ ಹೆಚ್ಚು ಸುಲಭವಾಗಿ ಮಾಡಲು ಸಾಧ್ಯವಾಗುತ್ತಿದೆ.

TKR ಅನ್ನು ಪರಿಗಣಿಸುವ ಸಮಯದಲ್ಲಿ ನೀವು ಅದರ ವಿವಿಧ ಅಂಶಗಳನ್ನು ಪರಿಗಣಿಸುವುದು ಒಳ್ಳೆಯದು. ಈ ಆಯ್ಕೆಗಳ ಕುರಿತಂತೆ ನೀವು ಶಸ್ತ್ರಚಿಕಿತ್ಸಕ ಜೊತೆ ಸಮಾಲೋಚಿಸಿ ಅತ್ಯುತ್ತಮ ನಿರ್ಧಾರ ಕೈಗೊಳ್ಳಲು ಸಾಧ್ಯವಾಗುವಲ್ಲಿ ಈ ಲೇಖನ ನೆರವಾಗುತ್ತದೆ.

## ನೀವು ಸಾಮಾನ್ಯವಾಗಿ ಪರಿಗಣಿಸಬಹುದಾದ ಪ್ರಶ್ನೆಗಳು

- ನಾನು ನನ್ನ ಶಸ್ತ್ರಚಿಕಿತ್ಸಕ ಆಯ್ಕೆ ಮಾಡುವುದು ಹೇಗೆ?
- ಅವರು ಸೂಕ್ತ ವ್ಯಕ್ತಿ ಎಂದು ಹೇಗೆ ನಿರ್ಧರಿಸಲಿ?
- ನನ್ನ ಕಡೆಯಿಂದ ಯಾವ ಪ್ರಶ್ನೆಗಳನ್ನು ಕೇಳಬೇಕು?
- ನನಗೆ ಅತ್ಯುತ್ತಮವಾದ ಪ್ರಕ್ರಿಯೆ / ಇಂಪ್ಲಾಂಟ್ ಯಾವುದು?
- ನನ್ನ ಸರ್ಜನ್ ಈ ಆಯ್ಕೆಗಳನ್ನೇ ಶಿಫಾರಸು ಮಾಡುವುದಕ್ಕೆ ಕಾರಣವೇನು?
- ಇಂಪ್ಲಾಂಟ್ ಹೇಗೆ ಕೆಲಸ ಮಾಡುತ್ತದೆ?
- ಸರ್ಜರಿಯ ಸಂಭಾವ್ಯ ಅಪಾಯಗಳು ಮತ್ತು ಕ್ಲಿಷ್ಟತೆಗಳೇನು?
- ಆಸ್ಪತ್ರೆಯಲ್ಲಿದ್ದಾಗ ಮತ್ತು ನಂತರ ನಾನು ಏನನ್ನು ನಿರೀಕ್ಷಿಸಬಹುದು?
- ವೆಚ್ಚಗಳು ಎಷ್ಟಾಗಬಹುದು?
- ಈ ವೆಚ್ಚಗಳನ್ನು ಭರಿಸಲು ನನಗೆ ಸಾಧ್ಯವಿದೆಯೇ?

ಒಂದು ನಿರ್ದಿಷ್ಟ ಸರ್ಜರಿ ಪ್ರಕ್ರಿಯೆಯ ಬಗ್ಗೆ ನೀವು ಮತ್ತು ಸರ್ಜನ್‌ರು ಒಪ್ಪಿದ ನಂತರ ನಿಮ್ಮ ವೇಳಾಪಟ್ಟಿಯನ್ನು ಸಿದ್ಧಪಡಿಸಬಹುದು.

**ರೋಗಿಗಳಿಗೆ ಒಳ್ಳೆಯ ಸುದ್ದಿ ಎಂದರೆ,** ಡಾ. ಚಂದ್ರಶೇಖರ್ ಪಿ. ಅವರು ಹೇಳುವಂತೆ: ಕನಿಷ್ಠ ಛೇದನದ TKR ತಂತ್ರಗಳು ನಿರಂತರವಾಗಿ ಸುಧಾರಣೆಗೊಳ್ಳುತ್ತಿದ್ದು, ಚೇತರಿಕೆಗೆ ಕಡಿಮೆ ಅವಧಿ ಸಾಕಾಗುತ್ತಿದೆ, ಆಸ್ಪತ್ರೆಯಲ್ಲಿ ಹೆಚ್ಚು ಕಾಲ ಇರಬೇಕಾಗಿಲ್ಲ, ವಾಕರ್ ಅಗತ್ಯ ಹೆಚ್ಚು ಕಾಲ ಇರುವುದಿಲ್ಲ. ಬೇಗ ನಿಮ್ಮ ಸಹಜ ಚಟುವಟಿಕೆಗಳನ್ನು ಪುನಃ ಆರಂಭಿಸಬಹುದು; ಸರ್ಜರಿ ನಂತರದ ನೋವು ಕಡಿಮೆ ಇರುತ್ತದೆ, ಮತ್ತು ಗಾಯದ ಕಲೆಯೂ ಚಿಕ್ಕದಾಗಿದ್ದು ಬೇಗ ಮಾಯವಾಗುತ್ತದೆ.

**ಈ ದಿಸೆಯಲ್ಲಿ ತೀರ ಇತ್ತೀಚಿನ ಮತ್ತು ಬಹುಶಃ ಅತ್ಯಂತ ಕೌತುಕಮಯ ಅನ್ವೇಷಣೆ ಎಂದರೆ ಕಂಪ್ಯೂಟರ್ ನಿರ್ದೇಶನ.** ಈಗ ಕಂಪ್ಯೂಟರ್, ಇಡೀ TKR ಪ್ರಕ್ರಿಯೆಯಲ್ಲಿ ಶಸ್ತ್ರಚಿಕಿತ್ಸಕರಿಗೆ ಉದ್ದಕ್ಕೂ ನಿರ್ದೇಶನ ನೀಡುತ್ತದೆ. ಕಂಪ್ಯೂಟರೀಕರಿಸಿದ ವ್ಯವಸ್ಥೆ ಸರ್ಜನ್‌ರಿಗೆ ಎಲ್ಲಿ ಹೊಸ ಇಂಪ್ಲಾಂಟ್‌ಅನ್ನು ಇರಿಸಬೇಕು ಎಂದು ಕರಾರುವಾಕ್ ಸಲಹೆ ನೀಡುತ್ತದೆ. ಅದಕ್ಕಾಗಿ ರೋಗಿಯ ದೇಹರಚನೆಯನ್ನು ಇನ್‌ಫ್ರಾರೆಡ್ ಮೂಲಕ ಪರಿಶೀಲಿಸುತ್ತದೆ. ಈ ತಂತ್ರಜ್ಞಾನವು TKRನ ಅಲ್ಪ ಹಾಗೂ ದೀರ್ಘಕಾಲಿಕ ಯಶಸ್ಸನ್ನು ಸುಧಾರಿಸುವ ಭರವಸೆ ನೀಡುತ್ತಿದೆ.